


# ಹಳೆಯ ಗೋವಾದ ಕುರುಹು ಕ್ಯಾಥರಿನ್ ಚರ್ಚ್

**ಗೋವಾದಲ್ಲಿ ಪೋರ್ಚುಗೀಸರ ಆಡಳಿತದ ಕುರುಹಾಗಿ ಇತಿಹಾಸದ ಪುಟದಲ್ಲಿ ಸ್ಥಾನ ಪಡೆದಿದೆ ಸೇಂಟ್ ಕ್ಯಾಥರಿನ್ ಚರ್ಚ್.**

■ ಶ್ರೀನಿವಾಸ ಮೂರ್ತಿ ಎನ್.ಎಸ್.



ಸುಂದರ ಕಡಲತೀರಗಳಿಗೆ ಹೆಸರಾಗಿರುವ ಗೋವಾ, ತನ್ನ ವಿಶಿಷ್ಟ ಸಂಸ್ಕೃತಿಗೂ ಹೆಸರುವಾಸಿ. ಅಲ್ಲಿನ ಸಂಸ್ಕತಿಯೊಂದಿಗೆ ತಳುಕು ಹಾಕಿಕೊಂಡಿರುವ ಪುರಾತನ ಚರ್ಚ್‌ಗಳು ಕೂಡ ಗೋವಾದ ಪ್ರವಾಸಿತಾಣಗಳಾಗಿ ಗುರುತಿಸಿಕೊಂಡಿವೆ. ಅಂಥ ಪ್ರವಾಸಿತಾಣಗಳಲ್ಲಿ 'ಸೇಂಟ್ ಕ್ಯಾಥೆಡ್ರಲ್ ಚರ್ಚ್' ಒಂದು.

ವಿಶ್ವ ಪಾರಂಪರಿಕ ತಾಣಗಳಲ್ಲಿ ಒಂದೆಂದು ಹೆಸರು ಪಡೆದುಕೊಂಡಿರುವ ಕ್ಯಾಥೆಡ್ರಲ್ ಚರ್ಚ್ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಸ್ಥಳಗಳಲ್ಲಿ ಒಂದು. ಇದಕ್ಕೆ 'ಅತಿ ಪುರಾತನ ಚರ್ಚ್' ಎಂದೂ ಕರೆಯಲಾಗುತ್ತದೆ.

ಚರ್ಚ್ ಪಕ್ಕದಲ್ಲಿಯೇ ಮ್ಯೂಸಿಯಂ ಇದೆ. ಅದರಿಂದ ಸ್ವಲ್ಪ ಮುಂದೆ ಹೋದಲ್ಲಿ ಮತ್ತೊಂದು ಹಳೆಯ ಚರ್ಚ್ ಗಮನಸೆಳೆಯುತ್ತದೆ. ಇದಕ್ಕೆ ಗೋವಾದ ಮೊದಲ ಚರ್ಚ್ ಎಂಬ ಹೆಗ್ಗಳಿಕೆಯೂ ಇದೆ. ಪೋರ್ಚುಗೀಸರು ಗೋವಾಕ್ಕೆ ಪ್ರವೇಶವಾದ ನಂತರ ನಿರ್ಮಿಸಿದ ಮೊದಲ ಪ್ರಾರ್ಥನಾ ಸ್ಥಳ ಇದು ಎನ್ನಲಾಗಿದೆ. ಅದೇ ಸೇಂಟ್ ಕ್ಯಾಥರಿನ್ ಚರ್ಚ್.

1510ರಲ್ಲಿ ಪೋರ್ಚುಗೀಸರು ಗೋವಾಕ್ಕೆ ಬಂದ ನಂತರ ಆಗಿನ ಗವರ್ನರ್ ಆಗಿದ್ದ ಅಫೋನ್ಸೊ ಡಿ ಅಲ್ಬುಕರ್ಕ್ ಅವರು ಸೇಂಟ್ ಕ್ಯಾಥರಿನ್ ಹಬ್ಬದ ದಿನದಂದು (ನವೆಂಬರ್ 25) ಅವರ ಗೌರವಾರ್ಥ ಈ ಚರ್ಚ್ ನಿರ್ಮಾಣ ಮಾಡಿದರು. ಆ ಸಮಯದಲ್ಲಿ ಅಲ್ಲಿ ಆಳುತಿದ್ದ ಬಿಜಾಪುರದ ಸುಲ್ತಾನನನ್ನು ಸೋಲಿಸಿ ಅಲ್ಲಿದ್ದ ಪ್ರಾರ್ಥನಾ ಸ್ಥಳದಲ್ಲಿ ತಾತ್ಕಾಲಿಕವಾಗಿ ಪ್ರಾರ್ಥನೆ ಸಲ್ಲಿಸಲು ಮಣ್ಣು ಮತ್ತು ತಾಳೆ ಎಲೆಗಳಿಂದ ಪ್ರಾರ್ಥನಾ ಸ್ಥಳವನ್ನು ನಿರ್ಮಿಸಿದರು.

1550ರಲ್ಲಿ ಗವರ್ನರ್ ಆಗಿದ್ದ ಜಾರ್ಜ್ ಕ್ಯಾಬ್ರಾಲ್ ಇದನ್ನು ವಿಸ್ತಾರ ಮಾಡಿದರು. ನಂತರ ಮುಂದಿನ ಎರಡು ವರ್ಷದಲ್ಲಿ ಲ್ಯಾಟರೈಟ್ ಬ್ಲಾಕ್ ಮತ್ತು ಸುಣ್ಣದಿಂದ ಇದನ್ನು ನಿರ್ಮಿಸಲಾಯಿತು. ಆ ಕಾಲದಲ್ಲಿಯೇ ಇದು 'ಏಷ್ಯಾದ ಅತ್ಯಂತ ಪುರಾತನ ಚರ್ಚ್'ಗಳಲ್ಲಿ ಒಂದು ಎನಿಸಿಕೊಂಡಿತ್ತು. ಇಲ್ಲಿರುವ ಶಾಸನ ಫಲಕದಲ್ಲಿಯೂ ಪ್ರಾರ್ಥನಾ ಸ್ಥಳವನ್ನು ವಿಸ್ತರಣೆ ಮಾಡಿದ ಉಲ್ಲೇಖವಿದೆ.

ಚರ್ಚ್ ಸರಳವಾದ ಒಳಾಂಗಣ ಮತ್ತು ಬಲಿಪೀಠ ಹೊಂದಿದೆ. ಮುಂಭಾಗದಲ್ಲಿ ಎರಡು ಬದಿಗಳಲ್ಲಿ ಗೋಪುರವನ್ನು ಹೊಂದಿದೆ. ಪೋರ್ಚುಗೀಸರ ಶೈಲಿಯಲ್ಲಿ ನಿರ್ಮಾಣವಾದ ಇಲ್ಲಿ ಆಯತಾಕಾರದ ಕಿಟಕಿ ಇದೆ. ಇಲ್ಲಿ ಮೈಕಾ ಚಿಪ್ಪುಗಳನ್ನು ಅಳವಡಿಸಲಾಗಿದೆ. ಈಗ ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ನಡೆಯದೇ ಇದ್ದರೂ ಕಟ್ಟಡ ಮಾತ್ರ ಗೋವಾದ ಇತಿಹಾಸ ಪುಟದಲ್ಲಿ ಪೋರ್ಚುಗೀಸರ ಆಡಳಿತದ ಕುರುಹಾಗಿ ಪ್ರವಾಸಿಗರನ್ನು ಸೆಳೆಯುತ್ತಿದೆ.

ಹಳೆಯ ಗೋವಾಕ್ಕೆ ಭೇಟಿ ನೀಡುವ ಪ್ರವಾಸಿಗರ ವೀಕ್ಷಣಾ ಸ್ಥಳಗಳ ಪಟ್ಟಿಯಲ್ಲಿ ಸೇಂಟ್ ಕ್ಯಾಥೆಡ್ರಲ್ ಆವರಣದಲ್ಲಿನ ಕ್ಯಾಥರಿನ್ ಚರ್ಚ್ ಇಲ್ಲದೆ ಹೋದಲ್ಲಿ ಗೋವಾ ಪ್ರವಾಸವೇ ಅಪೂರ್ಣ.

ಪ್ರತಿಕ್ರಿಯಿಸಿ: feedback@sudha.co.in